ಸಚಿವ ಸಂಪುಟದ ಮುಂದೆ ತಂದು, ಪ್ರವೇಶ ಶುಲ್ಕ ಹಾಕಬೇಕೇ ಅಥವ ಬೇಡವೇ ಎಂಬ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಜೊತೆಗೆ, ಇನ್ನೊಂದು ವಿಷಯ ತಾವು ಕೇಳಿದ್ದೀರಿ. ನಾಯಿಗಳ ಕಾಟ ಜಾಸ್ತಿಯಾಗಿದೆ ಎಂದು ಹೇಳಿದಿರಿ. ಮೊದಲೆಲ್ಲಾ ಜನಗಳ ಕಾಟ ಜಾಸ್ತಿಯಾಗಿ ಅನೈತಿಕ ವ್ಯವಹಾರಗಳು ನಡೆಯುತ್ತಿವೆ ಎಂದು ಹೇಳಿದ್ದರಿಂದ, ನಾವು ಅಲ್ಲಿ ಪೋಲೀಸಿನವರನ್ನು ಹಾಕಿ ಮತ್ತೆ ಪ್ರೈವೇಟ್ ಸೆಕ್ಯೂರಿಟಿಯವರನ್ನು ಹಾಕಿ ಅದನ್ನು ಸ್ವಲ್ಪ ನಿಯಂತ್ರಣಕ್ಕೆ ತಂದಿದ್ದೇವೆ. ಈ ನಾಯಿಗಳ ಕಾಟ ನನಗೆ ಗೊತ್ತಿರಲಿಲ್ಲ, ಅವುಗಳನ್ನೂ ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ರಾಮಲಿಂಗರೆಡ್ಡಿ : ಆ ಕೆರೆಯಲ್ಲಿ ಹೂಳು ಇದೆ, ಆ ಹೂಳನ್ನು ತೆಗೆದು ಬಹಳ ವರ್ಷಗಳಾಯಿತು. ಮತ್ತೆ ಬೆಳಿಗ್ಗೆ ವಾಕಿಂಗ್ ಹೋಗುವವರಿಗೆ ಒಂದು ಟೈಮ್ ನಿಗದಿಮಾಡಿ, ಅವರಿಗೆ ಪ್ರವೇಶ ಶುಲ್ಕ ವಿಧಿಸಬಾರದು. ಬೇರೆಯವರಿಗೆ ಹಾಗಿ ನಮ್ಮದೇನೂ ಅಭ್ಯಂತರವಿಲ್ಲ 9 ಗಂಟೆಯ ಮೇಲೆ ಯಾರು ಬರುತ್ತಾರೆ, ಅವರಿಗೆ ಶುಲ್ಕ ಹಾಕಿ. ಕೊನೇಪಕ್ಷ 8 ಗಂಟೆಯವರೆಗೆ ಯಾರು ವಾಕ್ ಮಾಡುತ್ತಾರೋ ಅವರಿಗೆ ಪ್ರವೇಶ ಶುಲ್ಕದಿಂದ ವಿನಾಯಿತಿ ಕೊಡಬೇಕು.

ಅಧ್ಯಕ್ಷರು : ಇದು ಒಳ್ಳೆಯ ಸಲಹೆ. ಬೆಳಗಿನ ವೇಳೆಯಲ್ಲಿ ವಾಕ್ ಹೋಗುವವರು ಟಿಕೆಟ್ ತೆಗೆದುಕೊಂಡು ಹೋಗುವಹಾಗೆ ಮಾಡಬೇಡಿ.

ಶ್ರೀ ಡಿ.ಟಿ. ಜಯಕುಮಾರ್ : ನಾನು ಇದರ ಬಗ್ಗೆ ಚರ್ಚೆ ಮಾಡಿದ್ದೇನೆ. ನಮಗೇನೂ ದುಡ್ಡಿಗೆ ತೊಂದರೆಯಿಲ್ಲವೆಂದು ಹೇಳಿದ್ದಾರೆ. 9 ಗಂಟೆಯಿಂದ ಸಾಯಂಕಾಲ 6 ಗಂಟೆಯವರಿಗೆ ಮಾತ್ರ ಪ್ರವೇಶ ಶುಲ್ಕ, ಅದರ ಹಿಂದೆ ಅಥವಾ ಮುಂದೆ ಹೋಗುವವರ ಬಗ್ಗೆಯೂ ಪರಿಶೀಲಿಸಿ ಯಾವುದು ಸೂಕ್ತ ಎಂಬುದರ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ.

## ಸರ್ಕಾರದಿಂದ ಆಲೂಗೆಡ್ಡೆ ಮತ್ತು ಈರುಳ್ಳಿ ಖರೀದಿ.

290 - ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕಳೆದ ವರ್ಷ ಆಲೂಗಡ್ಡೆ ಹಾಗೂ ಈರುಳ್ಳಿ ಬೆಲೆ ಕುಸಿತಗೊಂಡಿದ್ದರಿಂದ ರೈತರ ಹಿತಾಸಕ್ತಿ ಕಾಪಾಡಲು ಮಾರುಕಟ್ಟೆ ಮಧ್ಯಪ್ರವೇಶ ಯೋಜನೆ ಅನ್ವಯ ಬಹಿರಂಗ ಮಾರುಕಟ್ಟೆಯಲ್ಲಿ ಖರೀದಿಸಲು ಕೈಗೊಂಡ ಕ್ರಮವೇನು?*

*ಆ) ಒಟ್ಟು ಎಷ್ಟು ಮೊತ್ತ ಪ್ರಮಾಣದ ಸರಕು ಖರೀದಿಸಲಾಯಿತು. ಎಷ್ಟು ಮಾರಾಟ ಮಾಡಲಾಯಿತು.*

*ಇ) ಈ ಖರೀದಿ ವ್ಯವಹಾರದಲ್ಲಿ ಅವ್ಯವಹಾರವಾಗಿ ಕೇವಲ ಕೆಲವು ದಿನ ಮಾತ್ರ ಖರೀದಿಸಿ ಉಳಿದಂತೆ ಖರೀದಿಸದೇ ಇದ್ದುದರ ಫಲವಾಗಿ ರೈತರು ನಷ್ಟ ಅನುಭವಿಸುವಂತಾದದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯನ್ನು ಜಾರಿಗೊಳಿಸಿ ಆಲೂಗಡ್ಡೆ ಮತ್ತು ಈರುಳ್ಳಿ ಫಸಲನ್ನು ಸಂಗ್ರಹಿಸಲಾಗಿದೆ. ಈ ಕ್ರಮದಿಂದ ಸದರಿ ಉತ್ಪನ್ನಗಳು ಬೆಲೆ ಸ್ಥಿರಗೊಂಡು ರೈತರಿಗೆ ಅನುಕೂಲವಾಗಿದೆ.

ಆ) ಹಾಪ್‌ಕಾಮ್ಸ್ ಸಂಸ್ಥೆಯು ಒಟ್ಟು 3393 ಟನ್ ಆಲೂಗಡ್ಡೆಯನ್ನು ರೂ. 160.76 ಲಕ್ಷ ರೂಗಳನ್ನು ಖರ್ಚು ಮಾಡಿ ಖರೀದಿಸಲಾಗಿದೆ. ಹಾಗೂ ಒಟ್ಟು 473 ಟನ್ ಈರುಳ್ಳಿಯನ್ನು ರೂ.15.59 ಲಕ್ಷ ರೂಗಳನ್ನು ಖರ್ಚು ಮಾಡಿ ಖರೀದಿಸಲಾಗಿದೆ.

ಕರ್ನಾಟಕ ರಾಜ್ಯ ಸಹಕಾರಿ ಮಾರಾಟ ಮಂಡಳಿ, ಬೆಂಗಳೂರು ರವರು ಒಟ್ಟು 156 ಟನ್ ಈರುಳ್ಳಿಯನ್ನು ರೂ.6.20 ಲಕ್ಷಗಳನ್ನು ಖರ್ಚು ಮಾಡಿ ಖರೀದಿಸಿರುತ್ತಾರೆ.

ಈ ರೀತಿ ಖರೀದಿಸಲಾದ ಸರಕನ್ನು ಪೂರ್ಣವಾಗಿ ಮಾರಾಟ ಮಾಡಲಾಗಿದೆ. ಎಂದು ತಿಳಿಸಿರುತ್ತಾರೆ.

ಇ) ಬಂದಿರುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ವಿವರಗಳನ್ನು ಕೊಟ್ಟಿದ್ದಾರೆ. ನಾನು ಅವರಿಗೆ ನೇರವಾಗಿ ಒಂದೇ ಪ್ರಶ್ನೆ ಕೇಳುತ್ತೇನೆ. ರಾಜ್ಯದಲ್ಲಿ ಆಲೂಗೆಡ್ಡೆ, ಈರುಳ್ಳಿ ಉತ್ಪನ್ನ ಎಷ್ಟು? ಈ ಅಂಕಿ ಅಂಶ ತಮ್ಮಲ್ಲಿ ಇದೆಯೇ? ಯಾವ ಯಾವ ಮಾರುಕಟ್ಟೆಯಲ್ಲಿ ಆಲೂಗಡ್ಡೆ, ಈರುಳ್ಳಿಯನ್ನು ತಾವು ಖರೀದಿ ಮಾಡಿದ್ದೀರಿ? ಯಾವ ಬೆಲೆಗೆ ಖರೀದಿ ಮಾಡಿದ್ದೀರಿ? ಆಲೂಗೆಡ್ಡೆಯನ್ನು 3,393 ಟನ್ ಖರೀದಿ ಮಾಡಿದ್ದೀರಿ, ಈರುಳ್ಳಿಯನ್ನು ನಿಮ್ಮ ಸಹಕಾರಿ ಮಂಡಳಿ ಮತ್ತು ಹಾಪ್‌ಕಾಮ್ಸ್ ಎರಡೂ ಸೇರಿ 629 ಟನ್ ಖರೀದಿ ಮಾಡಿದ್ದೀರಿ. ಉತ್ತರ ಕರ್ನಾಟಕದಲ್ಲಿ ಈರುಳ್ಳಿ ಬೆಳೆದಂಥವರು, ಈರುಳ್ಳಿ ಕೊಳೆತು ಚರಂಡಿಗೆ ಹಾಕಿದರು. ಜಿಲ್ಲಾಮಂತ್ರಿಗಳನ್ನು ಘೇರಾವೋ ಮಾಡಿದರು, ಇದು ನಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೇ, ಇವತ್ತೇನು ರೈತರಿಗೆ ಟೊಮ್ಯಾಟೋ ಬೆಳೆಯ ದುಸ್ಥಿತಿ ಇದೆ, ಅದೇರೀತಿಯ ದುಸ್ಥಿತಿ ಕಳೆದಸಾರಿ ಆಲೂಗಡ್ಡೆ ಮತ್ತು ಈರುಳ್ಳಿಗೆ ಇತ್ತು ಅದೇ ಪ್ರಕಾರ ಹಾಪ್‌ಕಾಮ್ಸ್ ವತಿಯಿಂದ ಮಾರುಕಟ್ಟೆ ಮಧ್ಯಂತರ ಯೋಜನೆಯಲ್ಲಿ 9-10-96 ರಿಂದ 18-11-96ರ ವರೆಗೆ ಕೇವಲ 2-3 ದಿವಸ ಮಾಡಿದ್ದೇವೆಂಬ ಪ್ರಶ್ನೆ ಇದೆ. ಅಂದರೆ, ಸುಮಾರು ಒಂದು ತಿಂಗಳಿಗಿಂತ ಹೆಚ್ಚಾಗಿ ಈ ಮಾರುಕಟ್ಟೆ ಮಧ್ಯಂತರ ಯೋಜನೆಯಲ್ಲಿ ನಾವು ಖರೀದಿ ಮಾಡಿದ್ದೇವೆ. ಅದರಲ್ಲಿ ಆಲೂಗಡ್ಡೆ 3393 ಮೆಟ್ರಿಕ್ ಟನ್, ಈರುಳ್ಳಿ 473 ಮೆಟ್ರಿಕ್ ಟನ್-ಇದು ಹಾಪ್‌ಕಾಮ್ಸ್‌ನಿಂದ. ಮಾರ್ಕೆಟ್ ನಿಯಂತ್ರಣದ ಕಡೆಯಿಂದ ಬೇರೆ ಮತ್ತು ಕೆ.ಎ.ಐ.ಸಿ. ಯಿಂದ ಬೇರೆ. ಹಾಪ್‌ಕಾಮ್ಸ್‌ನಿಂದ 3393 ಮೆಟ್ರಿಕ್ ಟನ್ ಮತ್ತೆ ಈರುಳ್ಳಿ 473 ಮೆಟ್ರಿಕ್ ಟನ್ ನಾವು ಖರೀದಿ ಮಾಡಿದ್ದೇವೆ. ಹಣ ತೊಡಗಿಸಿದ್ದು ಸುಮಾರು ಒಂದು ಕೋಟಿ 60 ಲಕ್ಷ ರೂಪಾಯಿಗಳು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಾನ್ಯ ಮಂತ್ರಿಯವರಿಗೆ ಉಪ ಪ್ರಶ್ನೆ ಕೇಳುವುದೇನೆಂದರೆ, ಆಲೂಗಡ್ಡೆ, ಈರುಳ್ಳಿ ಉತ್ಪನ್ನ ಎಷ್ಟು ಎಂಬ ಬಗ್ಗೆ ತಮ್ಮ ಹತ್ತಿರ ಅಂಕಿ ಅಂಶ ಇದೆಯೇ? ಯಾವ ಯಾವ ಮಾರುಕಟ್ಟೆಯಲ್ಲಿ ಅವರು ಈರುಳ್ಳಿಯನ್ನು ಖರೀದಿ ಮಾಡಿದ್ದಾರೆ?

ಶ್ರೀ ಡಿ.ಟಿ. ಜಯಕುಮಾರ್ : ಹಾಸನ, ಬಳ್ಳಾರಿ ಮತ್ತು ತುಮಕೂರಿನಲ್ಲಿ ಕೊಂಡುಕೊಳ್ಳಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಲೂಗಡ್ಡೆಯನ್ನು ಹಾಸನದಲ್ಲಿ ಅವರು ಖರೀದಿ ಮಾಡಬೇಕಾಗಿತ್ತು ಮಾಡಿದ್ದಾರೆ. ಈರುಳ್ಳಿಯನ್ನು ಎಲ್ಲಿ ಖರೀದಿ ಮಾಡಿದ್ದಾರೆ?

ಶ್ರೀ ಡಿ.ಟಿ. ಜಯಕುಮಾರ್ : ಈರುಳ್ಳಿಯನ್ನು ಚಿತ್ರದುರ್ಗ ಮತ್ತು ಬಳ್ಳಾರಿಯಲ್ಲಿ ಖರೀದಿ ಮಾಡಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಎಷ್ಟು?

ಶ್ರೀ ಡಿ.ಟಿ. ಜಯಕುಮಾರ್ : ಟೋಟಲ್ 477 ಟನ್.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಪ್ ಕಾಮ್ಸ್ ಮೂಲಕ ಆಲೂಗಡ್ಡೆ ಮತ್ತು ಈರುಳ್ಳಿಯನ್ನು ಯಾರು ಯಾರಿಂದ ಎಷ್ಟೆಷ್ಟು ಖರೀದಿ ಮಾಡಲಾಗಿದೆ ಎಂಬ ಬಗ್ಗೆ ರೈತರುಗಳ ಯಾದಿ ಮಾನ್ಯ ಮಂತ್ರಿಯವರ ಹತ್ತಿರ ಇದೆಯೇ? ಉತ್ತರ ಕರ್ನಾಟಕದಲ್ಲಿ ಆಲೂಗಡ್ಡೆ ಮತ್ತು ಈರುಳ್ಳಿಯನ್ನು ಖರೀದಿ ಮಾಡದೇ ಇರುವುದರಿಂದ ಬೆಲೆ ಸಿಗದೆ ರೈತರು ಅದನ್ನೆಲ್ಲಾ ಚರಂಡಿಗೆ ಸುರಿದರು. ಅದನ್ನು ಕೊಂಡು ಕೊಳ್ಳುವುದಕ್ಕೆ ಉತ್ತರ ಕರ್ನಾಟಕಕ್ಕೆ ಏಕೆ ಆದ್ಯತೆಯನ್ನು ಕೊಡಲಿಲ್ಲ? ಅಮೇಲೆ ಮತ್ತೊಂದು ವಿಷಯದ ಬಗ್ಗೆ ಮಾನ್ಯ ಮಂತ್ರಿಯವರು ಯೋಚನೆ ಮಾಡ ಉತ್ತರ ಕೊಡಬೇಕು. ಅದೇನೆಂದರೆ, ಹಾಪ್‌ಕಾಮ್ಸ್‌ನವರು ಬರೀ ಕಾಗದದ ಮೇಲೆ 68 ಲಕ್ಷ ರೂಪಾಯಿ ಈರುಳ್ಳಿಯನ್ನು ಖರೀದಿ ಮಾಡಿದ್ದೇವೆಂದು ತೋರಿಸಿದ್ದಾರೆ, ಅದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ ಹಾಗೂ ಇದರ ಬಗ್ಗೆ ಸಿ.ಒ.ಡಿ. ತನಿಖೆಯಾಗಬೇಕೆಂದು ಒತ್ತಾಯ ಮಾಡುತ್ತೇನೆಂದು ಕ್ಯಾಬಿನೆಟ್ ಸಚಿವರೊಬ್ಬರು ಪತ್ರಿಕಾ ಹೇಳಿಕೆ ಕೊಟ್ಟಿದ್ದಾರೆ. ಮಾನ್ಯ ಮಂತ್ರಿಯವರ ಉತ್ತರದಲ್ಲಿ ಖರೀದಿಯಲ್ಲಿ ಅವ್ಯವಹಾರ ನಡೆದಿರುವುದು ಗಮನಕ್ಕೆ ಬಂದಿಲ್ಲವೆಂದು ಹೇಳಲಾಗಿದೆ. ಮಾನ್ಯ ಕ್ಯಾಬಿನೆಟ್ ಸಚಿವರೊಬ್ಬರು ತನಿಖೆಯಾಗಬೇಕೆಂದು ಹೇಳಿರುವುದು ಮಾನ್ಯ ಮಂತ್ರಿಯವರ ಗಮನಕ್ಕೆ ಬಂದಿದೆಯೇ?

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಸಭಾಧ್ಯಕ್ಷರೆ, ಆಲೂಗಡ್ಡೆಯನ್ನು ಕೊಂಡುಕೊಳ್ಳುವುದಕ್ಕೆ ನಾವೇ ಹೋಗಿದ್ದುದು ನಿಜ. ಆದರೆ, ಈರುಳ್ಳಿ ವಿಷಯದಲ್ಲಿ. ಯಾವ ಯಾವ ರೈತರುಗಳು ತಂದುಕೊಟ್ಟಿದ್ದಾರೋ ಅವರಿಂದ ಮಾತ್ರ 477 ಟನ್ ಕೊಂಡುಕೊಂಡಿದ್ದೇವೆ. ಈರುಳ್ಳಿಯನ್ನು ಚರಂಡಿಗೆ ಹಾಕಿರುವ ವಿಷಯ ನಮ್ಮ ಗಮನಕ್ಕೆ ಬಂದಿಲ್ಲ. ಈರುಳ್ಳಿ ಬೆಳೆಗಾರರಿಗೆ ಒಟ್ಟು 58 ಲಕ್ಷ ರೂಪಾಯಿಗಳು ನಷ್ಟವಾಗಿದೆ ಎಂದು ಈಗಾಗಲೇ ವಿಧಾನ-ಪರಿಷತ್ತಿನಲ್ಲಿ ಹೇಳಿಕೆ ಮಾಡಲಾಗಿದೆ. ಇನ್ನು ದುರುಪಯೋಗ ನಡೆದಿದೆ ಎನ್ನುವ ವಿಷಯಕ್ಕೆ ಸಂಬಂಧಪಟ್ಟಂತೆ ಕೋ-ಆಪರೇಟಿವ್ ಆ್ಯಕ್ಟ್‌ನ

ನಿಯಮ 64ರ ಪ್ರಕಾರ ತನಿಖೆಗೆ ಆದೇಶ ಕೊಡಲಾಗಿದೆ. ಆ ಆದೇಶದಂತೆ ಈಗಾಗಲೇ ಆಡಿಟ್ ಕೆಲಸ ಪ್ರಾರಂಭವಾಗಿದೆ. ಇನ್ನು 15 ದಿವಸಗಳೊಳಗೆ ಆಡಿಟ್ ವರದಿ ಬರುತ್ತದೆ. ವರದಿಯಲ್ಲಿ ಲೋಪ ದೋಷಗಳು ನಡೆದಿವೆಯೆಂದು ಗೊತ್ತಾದ ತಕ್ಷಣ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ರಾಜ್ಯದ ಉದ್ದಗಲಕ್ಕೂ ಸುತ್ತಿ ಬಂದಿದ್ದೇನೆ. ತನಿಖೆ ಮಾಡಬೇಕೆಂದು ಭೈರೇಗೌಡರು ಹೇಳಿರುವ ವಿಷಯದ ಮೇಲೆ ನಾನು ಹೇಳಿತ್ತಿಲ್ಲ. ಸುಮಾರು 75 ಲಕ್ಷ ರೂಪಾಯಿ, ಖರೀದಿ ಮಾಡದೆ ಬರೀ ಕಾಗದದ ಮೇಲೆ ಲೆಕ್ಕ ತೋರಿಸಿ ಲೂಟಿಯಾಗಿದೆ. ಕ್ಯಾಬಿನೆಟ್ ಸಚಿವರಾಗಿರುವ ಮಾನ್ಯ ಭೈರೇಗೌಡರೆ ಸ್ವತಃ ಇದರ ಬಗ್ಗೆ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದು ಸಿ.ಓ.ಡಿ., ತನಿಖೆಯಾಗಬೇಕೆಂದು ಹೇಳಿದ್ದಾರೆ. ಈ ವಿಷಯ ಪತ್ರಿಕೆಗಳಲ್ಲೂ ಬಂದಿದೆ. ಸಿ.ಓ.ಡಿ., ತನಿಖೆಯನ್ನು ಮಾಡಿಸದೆ ಇಲಾಖೆಯ ವತಿಯಿಂದ ಸುಮ್ಮನೆ ತನಿಖೆ ಮಾಡಿಸಿದ ಹಾಗೆ ಮಾಡಿಸಿ ಅದನ್ನು ಮುಚ್ಚಿಹಾಕುವಂಥ ಷಡ್ಯಂತ್ರ ನಡೆಯುತ್ತಿದೆಯೆಂದು ನಾನು ಹೇಳುತ್ತೇನೆ. ಕ್ಯಾಬಿನೆಟ್ ಸಚಿವರೇ ಹೇಳಿರುವುದರಿಂದ ಇದರ ಬಗ್ಗೆ ಸಿ.ಓ.ಡಿ. ತನಿಖೆಯನ್ನು ಮಾಡಿಸಲಾಗುತ್ತದೆಯೇ?

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಸಭಾಧ್ಯಕ್ಷರೆ, ನಾನು ಆಗಲೇ ಹೇಳಿದ್ದೇನೆ. ಒಂದು ರೂಪಾಯಿ ದುರುಪಯೋಗವಾಗಿದ್ದರೂ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಇದು ಕೋ-ಆಪರೇಟಿವ್ ವ್ಯಾಪ್ತಿಯಲ್ಲಿ ಬರುವುದಿರಿಂದ ಸಿ.ಓ.ಡಿ. ಅಥವಾ ಲೋಕಾಯುಕ್ತದಿಂದ ತನಿಖೆ ಮಾಡುವುದಕ್ಕೆ ಬರುವುದಿಲ್ಲವೆಂದು ಅಧಿಕಾರಿಗಳು ಹೇಳಿದ್ದರಿಂದ ಆರ್.ಸಿ.ಎಸ್.ಅವರ ಮುಖಾಂತರ ಕೋ-ಆಪರೇಟಿವ್ ಆ್ಯಕ್ಟ್ 64 ರ ನಿಯಮದ ಪ್ರಕಾರ ಈಗಾಗಲೇ ತನಿಖೆಗೆ ಆದೇಶ ಮಾಡಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕ್ಯಾಬಿನೆಟ್ ಸಚಿವರೇ ಇದರ ಬಗ್ಗೆ ಸಿ.ಓ.ಡಿ. ತನಿಖೆಯಾಗಬೇಕೆಂದು ಮುಖ್ಯ-ಮಂತ್ರಿಗಳಿಗೆ ಪತ್ರ ಬರೆದಿರುವುದರಿಂದ ಇದರ ಬಗ್ಗೆ ಇಮ್ಮಿಡಿಯೇಟ್ ಆಗಿ ಸಿ.ಓ.ಡಿ., ತನಿಖೆಯಾಗಬೇಕು, ಮತ್ತು ಯಾರು ಯಾರಿಂದ ಈರುಳ್ಳಿ ಖರೀದಿ ಮಾಡಲಾಗಿದೆ ಎಂಬ ಬಗ್ಗೆ ರೈತರುಗಳ ಯಾದಿಯನ್ನು ಕೊಡಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಕೋ-ಆಪರೇಟಿವ್ ಆ್ಯಕ್ಟ್ ಪ್ರಕಾರ ತನಿಖೆಗೆ ಆದೇಶ ನೀಡಿರುವುದರಿಂದ ಈಗಾಗಲೇ ಆಡಿಟ್ ಪ್ರಾರಂಭವಾಗಿದೆ. ಆಡಿಟ್ ವರದಿಯಲ್ಲಿ ಲೋಪ ದೋಷಗಳು ಕಂಡು ಬಂದರೆ ಯಾವುದೇ ವಿಧವಾದ ತನಿಖೆ ಮಾಡಿಸಲು ಸಂಬಂಧಪಟ್ಟ ಮಂತ್ರಿಯವರು ತಯಾರಿದ್ದಾರೆ. ಇದರಿಂದಾಗಿ ಮಾನ್ಯ ಯಡಿಯೂರಪ್ಪನವರಿಗೆ ಇರತಕ್ಕಂಥ ಸಂಶಯ ಬಗೆಹರಿಯುತ್ತದೆಂದು ನಾನು ಭಾವಿಸುತ್ತೇನೆ. ಆಡಿಟ್ ವರದಿ ಇನ್ನು 15 ದಿವಸಗಳೊಳಗೆ ಬರುತ್ತದೆಂದು ಮತ್ತು ದುರುಪಯೋಗವಾಗಿರುವುದು ಗೊತ್ತಾದರೆ ಯಾರಿಗೂ ಶೀಲ್ಡ್ ಮಾಡದೆ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಮಂತ್ರಿಯವರು ಹೇಳಿದ್ದಾರೆ. ಆಮೇಲೆ, ಈರುಳ್ಳಿ ಖರೀದಿ

ಮಾಡಿರುವ ಬಗ್ಗೆ ಯಾರು ಯಾರಿಂದ ಖರೀದಿ ಮಾಡಲಾಗಿದೆ ಎಂಬ ಪಟ್ಟಿ ಕೊಡಬೇಕೆಂದು ಕೇಳಿದ್ದಾರೆ. ಈ ತಕ್ಷಣದಲ್ಲಿ ಆ ಪಟ್ಟಿಯನ್ನು ಒದಗಿಸಲು ಕಷ್ಟವಾಗುತ್ತದೆ. ನಂತರ ಆ ಪಟ್ಟಿಯನ್ನು ಕೊಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕ್ಯಾಬಿನೆಟ್ ಸಚಿವರು ಮೊದಲು ಒಂದು ತರಹ ಹೇಳಿ ಈಗ ಒಂದು ತರಹ ಹೇಳಿದರೆ ಅದು ಶೋಭೆ ತರತಕ್ಕಂಥ ಸಂಗತಿಯೇ? ಇದರಲ್ಲಿ 78 ಲಕ್ಷ ರೂಪಾಯಿ ಗುಳುಂ ಆಗಿದೆ, ಲೆಕ್ಕಗಳೆಲ್ಲಾ ಬರೀ ಕಾಗದದ ಮೇಲೆ ಇರುವುದರಿಂದ ಇದರ ಬಗ್ಗೆ ಸಿ.ಓ.ಡಿ., ತನಿಖೆಯಾಗಬೇಕೆಂದು ಮುಖ್ಯ ಮಂತ್ರಿಗಳಿಗೆ ಪತ್ರವನ್ನು ಬರೆಯುವರೂ ಅವರೇ, ಈಗ ಬೇರೆ ತರಹ ಹೇಳುತ್ತಿದ್ದಾರೆ. ಇದರಲ್ಲಿ ಏನು ಅಡ್ಜಸ್ಟ್‌ಮೆಂಟ್ ಆಯಿತು? ಏನು ಹೊಂದಾಣಿಕೆ ಆಯಿತು? ಇದರಿಂದ ಜನ ತಪ್ಪು ತಿಳಿದುಕೊಳ್ಳುವುದಿಲ್ಲವೇ?

ಶ್ರೀ ಕೆ.ಎಸ್. ಈಶ್ವರಪ್ಪ : ಇದರಲ್ಲಿ ಏನು ಹೊಂದಾಣಿಕೆ ಆಯಿತೆಂಬ ಅಭಿಪ್ರಾಯ ಜನರಲ್ಲಿ ಬಂದು ಆ ರೀತಿ ಮಾತನಾಡಿಕೊಳ್ಳುತ್ತಾರೆ.

ಶ್ರೀ ಡಿ.ಟಿ. ಜಯಕುಮಾರ್ : ಅಡ್ಜಸ್ಟ್‌ಮೆಂಟ್ ಅಂದರೆ ಏನು ಅರ್ಥ ಸ್ವಾಮಿ?

ಶ್ರೀ ಬಿ.ಎಸ್.ಯಡಿಯೂರಪ್ಪ: ಅದು ನನಗೆ ಗೊತ್ತಿಲ್ಲ. ಅವರನ್ನೇ ಕೇಳಬೇಕು. ಈ ಬಗ್ಗೆ ಸಿ.ಓ.ಡಿ. ತನಿಖೆಯಾಗಬೇಕೆಂದು ಮುಖ್ಯ ಮಂತ್ರಿಗಳಿಗೆ ಈ ಮೊದಲು ಏತಕ್ಕೆ ಪತ್ರ ಬರೆದರು? ಈಗ ಒಂದು ತರಹ ಹೇಳುವುದು ಏಕೆ? ಆವತ್ತು ಹೇಳಿಕೆ ಮೂಲಕ ಜನರಿಗೆ ಹೇಳುವುದು ಬೇರೆ. ಈಗ ಅವರವರು ಹೊಂದಾಣಿಕೆ ಮಾಡಿಕೊಂಡು ಕೋ-ಆಪರೇಟಿವ್ ಆಕ್ಟ್ ಪ್ರಕಾರ ತನಿಖೆ ಮಾಡುಸುತ್ತೇವೆಂದು ಹೇಳಿ ಮುಚ್ಚಿಹಾಕುವ ಪ್ರಯತ್ನ ನಡೆಯುತ್ತಿದೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಈ ಮಾತಿಗೆ ನಾನು ತೀವ್ರವಾದ ಆಕ್ಷೇಪವನ್ನು ವ್ಯಕ್ತಪಡಿಸುತ್ತೇನೆ. ಇದರಲ್ಲಿ ಯಾವ ಹೊಂದಾಣಿಕೆಯೂ ಇಲ್ಲ, ಅಡ್ಜಸ್ಟ್‌ಮೆಂಟೂ ಇಲ್ಲ. ಇದರಲ್ಲಿ ಯಾರೇ ತಪ್ಪು ಮಾಡಿದ್ದರೂ ಅವರ ವಿರುದ್ಧ ಉಗ್ರವಾದ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ತಯಾರಿದೆ. ಇದರಲ್ಲಿ ಅಡ್ಜಸ್ಟ್‌ಮೆಂಟ್ ಏನಿದೆ? ಆಡಿಟ್ ಆಗುತ್ತಿದೆಯೆಂದು ಸಂಬಂಧಪಟ್ಟ ಮಂತ್ರಿಯವರೇ ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದನ್ನು ಮುಚ್ಚಿಹಾಕುವುದಕ್ಕೋಸ್ಕರ ಆಡಿಟ್ ಮಾಡಿಸಲಾಗುತ್ತಿದೆ. ಆವತ್ತು ಕ್ಯಾಬಿನೆಟ್ ಸಚಿವರಾಗಿರುವ ಅವರು ಪತ್ರಿಕಾ ಹೇಳಿಕೆ ಕೊಡುವಾಗ ಅವರಿಬ್ಬರಲ್ಲಿ ಭಿನ್ನಾಭಿಪ್ರಾಯ ಏನಿತ್ತು? ಈಗ ಸಹಕಾರ ಸಂಘಗಳ ನಿಯಮದ ಪ್ರಕಾರ ತನಿಖೆ ಮಾಡಿಸುವ ಹೊಂದಾಣಿಕೆ ಏಕೆ? ಈ ವ್ಯವಸ್ಥೆ ಬಗ್ಗೆ ಜನ ತಪ್ಪು ತಿಳಿದುಕೊಳ್ಳುತ್ತಾರೆ.

ಅಧ್ಯಕ್ಷರು : ತಾವು ಏಕಮುಖವಾಗಿ ಮಾತನಾಡಿದರೆ, ನೀವು ಮಾತನಾಡಿದ್ದು ಮಾತ್ರ ಪತ್ರಿಕೆಗಳಲ್ಲಿ ಬರುತ್ತದೆ. ಕೊ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ 64 ನೇ ನಿಯಮದ ಪ್ರಕಾರ ಎನ್‌ಕ್ವೈರಿ ಬಹಳ ಗಂಭೀರ ಸ್ವರೂಪದ್ದೇ ಆಗಿರುತ್ತದೆ. ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಕೆಳಗಡೆ ರಿಜಿಸ್ಟರ್ ಆಗಿರುವ ಸಂಸ್ಥೆ ಇದಾಗಿರುವುದರಿಂದ ಆಡಿಟರ್ಸ್‌ನ್ನು ಹಿಡಿದು ಅವರು ಮ್ಯಾನುಪಿಲೇಟ್

ಮಾಡುವುದಕ್ಕಾಗುವುದಿಲ್ಲ. ಆಡಿಟರ್ಸ್ ಬಂದು, ಕೊಂಡಿದ್ದು ಎಲ್ಲಿಂದ? ಕೊಂಡಿದ್ದಾರೆಯೇ? ಅಥವಾ ಇಲ್ಲವೇ? ದುಡ್ಡು ಎಷ್ಟು ಖರ್ಚಾಗಿದೆ ಎಂದು ನೋಡುತ್ತಾರೆ. ಆಡಿಟ್ ವರದಿಯು ಇನ್ನು ಕೆಲವೇ ದಿನಗಳಲ್ಲಿ ಬರುತ್ತದೆ, ಅದು ಬಂದ ನಂತರ ಸಿ.ಓ.ಡಿ. ಎನ್‌ಕ್ವೈರಿಯಾಗಲೀ ಅಥವಾ ಬೇರೆ ಇನ್ನಾವುದೇ ಎನ್‌ಕ್ವೈರಿಯಾಗಲೀ ನಾವು ಮಾಡಿಸುತ್ತೇವೆ ಎನ್‌ಕ್ವೈರಿ ಬಗ್ಗೆ ಹಿಂಜರಿಯುವುದಿಲ್ಲ ಎನ್ನುವ ಮಾತನ್ನು ಮಾನ್ಯ ಮಂತ್ರಿಯವರು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನಗಿರುವಂಥ ಅನುಮಾನ ಏನೆಂದರೆ, ಅಲ್ಲಿ ಯಾವುದೇ ದಾಖಲೆ ಇಲ್ಲ. ಆಡಿಟರ್ಸ್ ತನಿಖೆಗೆ ಬರುವುದರೊಳಗೆ ರೈತರುಗಳನ್ನು ಹುಡುಕಿಕೊಂಡು ಹೋಗಿ ನಮ್ಮಿಂದ ಇವರು ಕೊಂಡುಕೊಂಡಿದ್ದಾರೆಂದು ತಿಳಿಸುವ ಪತ್ರಗಳನ್ನು ಪಡೆಯುತ್ತಿದ್ದಾರೆ. ಮಾನ್ಯ ಭೈರೇಗೌಡರ ಬಗ್ಗೆ ವಿಶ್ವಾಸ ಇದೆ. ಅವರೇ ಕ್ಯಾಬಿನೆಟ್ ಸಚಿವರಾಗಿ ಇದರ ಬಗ್ಗೆ ಸಿ.ಓ.ಡಿ. ತನಿಖೆಯಾಗಬೇಕೆಂದು ಮುಖ್ಯ ಮಂತ್ರಿಗಳಿಗೆ ಪತ್ರ ಬರೆಯುವಾಗ ಅವರಿಗೆ ಪರಿಜ್ಞಾನ ಇರಲಿಲ್ಲವೇ? ಕೋ-ಆಪರೇಟಿವ್ ನಿಯಮದ ಪ್ರಕಾರವೇ ತನಿಖೆ ಮಾಡಿಸಬೇಕೆಂದು ಆಗ ಅನಿಸಲಿಲ್ಲವೇ? ಈಗ ಏಕೆ ಬದಲಾವಣೆ ಅವರ ನಿಲುವಿನಲ್ಲಿ?

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ನಮ್ಮ ಹಳ್ಳಿ ಕಡೆ ಒಂದು ಗಾದೆ ಇದೆ, "ಕಳ್ಳ ಮದುವೆಯಲ್ಲಿ ಬಗ್ಗಿ ಓಲಗ ಊದಿದರೆ ಶಬ್ದ ಕಡಿಮೆಯಾಗುವುದಿಲ್ಲ" ಎಂದು 60 ಲಕ್ಷದ್ದು 70 ಲಕ್ಷದ್ದು ಅಡ್ಜಸ್ಟ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈರುಳ್ಳಿ ಖರೀದಿ ಮಾಡಿದ್ದೇವೆಂದು ಕೋಟಿ ಕೋಟಿ ನುಂಗುತ್ತಿದ್ದಾರೆ. ಈರುಳ್ಳಿ ಖರೀದಿ ಮಾಡಿರುವ ರೈತರುಗಳ ಯಾದಿಯನ್ನು ತೋರಿಸಲಿ?

ಅಧ್ಯಕ್ಷರು : ಈರುಳ್ಳಿ ಖರೀದಿ ಮಾಡಿರುವ ಬಗ್ಗೆ ರೈತರುಗಳ ಪಟ್ಟಿಯನ್ನು ಇವರಿಗೆ ಕಳುಹಿಸಿಕೊಡಿ.

ಶ್ರೀ ವಾಟಾಳ್ ನಾಗರಾಜ್ : 60 ಲಕ್ಷ ರೂಪಾಯಿಗಳನ್ನು ಅಡ್ಜಸ್ಟ್ ಮಾಡುವುದಕ್ಕಾಗುವುದಿಲ್ಲವೆಂದು ತಾವು ಹೇಳಿದ್ದೀರಿ. ಹಾಗಾದರೆ ಎಷ್ಟು ಮಾಡಬಹುದು ಸ್ವಾಮಿ?

ಅಧ್ಯಕ್ಷರು : ಅವರ ಬಗ್ಗೆ ನನಗೆ ಅನುಭವ ಇಲ್ಲ. ಅಡ್ಜಸ್ಟ್‌ಮೆಂಟ್ ಏನಿದ್ದರೂ ನಿಮಗೆ ಮತ್ತು ನಂಜೇಗೌಡರಿಗಷ್ಟೇ ಗೊತ್ತು. ನನಗೆ ಗೊತ್ತಿಲ್ಲ.

**ಉಡುಪಿಯಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸುವುದಕ್ಕಾಗಿ ಭೂಮಿಯನ್ನು ಒದಗಿಸುವುದು**

292 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಉಡುಪಿಯಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸ್ವಂತ ಬಸ್ ನಿಲ್ದಾಣವಿಲ್ಲದೆ ಇರುವುದರಿಂದ ಖಾಸಗಿಯವರ ಜಾಗವನ್ನು ಗೊತ್ತುಪಡಿಸಿ ಸ್ವಾಧೀನ ಪಡಿಸುವ ಬಗ್ಗೆ ಸರ್ಕಾರವು ಏನಾದರೂ ಕ್ರಮ ತೆಗೆದು ಕೊಂಡಿರುವುದೇ?*